ಅನಸೂಯ ಟಿ. ಕೇದಿಗೆಮನೆ
ದೂರದ ಬೆಟ್ಟ ನುಣ್ಣಗೆ. ಏಕೆ?



ಬೆಳೆದ ಮರಗಳನ್ನು ಕಾಡುಗಳ್ಳರು ಆಗಾಗ್ಗೆ ಶೇವ್ ಮಾಡಿಬಿಡುವುದರಿಂದ.

ಅಮರಯ್ಯ ಪತ್ರಿಮಠ, ಸುರಪುರ
ಪಾಂಡವ–ಕೌರವರ ನಡುವೆ ಸಂಧಾನ ನಡೆಸಲು ಕೃಷ್ಣನ ಬದಲು ಶಕುನಿಯನ್ನು ಕಳುಹಿಸಿದ್ದರೆ ಏನಾಗುತ್ತಿತ್ತು?
ದ್ರೌಪದಿ ತಮ್ಮ ಮನೆಯ ಗೇಟಿನ ಮುಂದೆ ನೋ ಎಂಟ್ರಿ ಬೋರ್ಡ್ ಹಾಕಿರುತ್ತಿದ್ದಳು.

ಬಿ.ಆರ್. ಉಷಾ, ಕೆನಡ
ಕಾಲು ಗುರುತು ಇಟ್ಟುಕೊಂಡ ಪಕ್ಷ ಗೆಲ್ಲುತ್ತಂತೆ. ನಿಜವಾ?
ಹಾಗೆಲ್ಲ ಕಾಲು, ಮುಕ್ಕಾಲು ಇಟ್ಟುಕೊಳ್ಳುವಂತಿಲ್ಲ. ಪೂರ್ತಿ ಗುರುತೇ ಇರಬೇಕು.

ಸಿಹಿಮೊಗೆ ರಮೇಶ್, ಮೈಸೂರು
ಇಲ್ಲೊಬ್ಬ ಆಟೊ ಚಾಲಕ ತನ್ನ ವಾಹನದ ಮೇಲೆ 'ಹಿತಶತ್ರುಗಳ ಆಶೀರ್ವಾದ' ಎಂದು ಬರೆಸಿದ್ದಾನಲ್ಲ?




ಓಹ್! ಇದು 'ಅತ್ತೆಯ ಆಶೀರ್ವಾದ' ಎನ್ನುವುದರ ಪರ್ಯಾಯ ರೂಪ.

ಸುಧೀಂದ್ರ, ಬೆಂಗಳೂರು
ಕೇಕ್ ಅಂಗಡಿಯ ಸುಂದರಿಗೆ ಸೊಗಸಾಗಿ 'ಕೇಕ್ ಬ್ಯೂಟಿ' ಎಂದು ಕರೆದರೆ ನನ್ನನ್ನು 'ಬಾಲ್ಡಿ' ಎಂದುಬಿಟ್ಟಳಲ್ಲಾ?
ಓಹ್! ನಿಮ್ಮ ಮಾತನ್ನು ಕೇಳಿ ಅವಳು ಸತ್ಯವನ್ನೇ ಹೇಳಬೇಕು ಎಂದುಕೊಂಡಳಂತೆ.

ಜಯಶ್ರೀ, ಬೆಂಗಳೂರು
ಒಂದು ಒಳ್ಳೆಯ ಕುಟುಂಬಕ್ಕೆ ಸಂಪ್ರದಾಯ ಮುಖ್ಯವೋ, ಸಂಸಾರ ಮುಖ್ಯವೋ?
ಈಗಿನ ಲಿವಿಂಗ್ ಟುಗೆದರ್ ದಿನಗಳಲ್ಲಿ ಸಂಸಾರವೇ ಒಂದು ಸಂಪ್ರದಾಯ ಮೇಡಂ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಹಣದ ಬೆಲೆ ಗೊತ್ತಾಗೋದು ಕಷ್ಟ ಬಂದಾಗ. ತಾಯಿಯ ಬೆಲೆ?
ವಿದೇಶದಲ್ಲಿ ಹೆತ್ತ ಮಗುವನ್ನು ಕಡಿಮೆ ಖರ್ಚಿನಲ್ಲಿ ನೋಡಿಕೊಳ್ಳುವವರು ಬೇಕಾದಾಗ.

ಮಂಡಿ ಕುಮಾರ್, ಬೆಂಗಳೂರು
ಸಾಹುಕಾರನಾದವನು ಸಹಕಾರದ ಮನೋಭಾವ ಹೊಂದಿರುವುದಿಲ್ಲವೇಕೆ?
ಸಹಕಾರದ ಮನೋಭಾವ ಇಲ್ಲದ್ದರಿಂದಲೇ ಅವನು ಸಾಹುಕಾರನಾಗಿದ್ದರಿಂದ.

ಕುಮಾರ ಚಲವಾದಿ, ಹಾಸನ
ಹುಡುಗರಾಗಿದ್ದಾಗ ಹುಡುಗಿಯರನ್ನು ಚುಡಾಯಿಸಿದರೆ ರಸಿಕ ಎನ್ನುವರು. ವಯಸ್ಸಾದವರು ಚುಡಾಯಿಸಿದರೆ?
ಹಿಡಿದು ನಾಲ್ಕು ತದುಕ ಎನ್ನುತ್ತಾರೆ.

ಜಗದೀಶ ಬಿ. ಹೊಸೂರು, ಮೈಸೂರು
ಎಲ್ಲದಕ್ಕೂ ಆತುರ ಪಡುವ ಮನುಷ್ಯ ಪರಲೋಕಕ್ಕೆ ಹೋಗಲು ಆತುರಪಡಲ್ಲ ಏಕೆ?
ಅಲ್ಲಿನ ಊಟ, ವಸತಿ, ಸವಲತ್ತುಗಳ ವಿವರ ಸಿಕ್ಕಿಲ್ಲವಾದ್ದರಿಂದ ಹಿಂಜರಿತವಂತೆ.

ಶಾಂತ ಗೌಡ, ಬೆಂಗಳೂರು
ಕೊಲ್ಲುವ ದೇವರು ಹೆಚ್ಚೋ, ಕಾಯುವ ದೇವರು ಹೆಚ್ಚೋ?
ಇಬ್ಬರೂ ಹೆಚ್ಚೇ – ಹರಿಹರರ ಹೆಸರಿನ ಆರಂಭವೇ ಹೆಚ್ಚು (H).

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನ ಮನಸ್ಸು ಗಗನದಷ್ಟು ವಿಶಾಲವಿದ್ದರೆ ಹೇಗಿರುತ್ತೆ?
ಏಕಕಾಲದಲ್ಲಿ ಬಹಳಷ್ಟು ತಾರೆಯರು ಮಿನುಗುವುದರಿಂದ ಸಿಕ್ಕಾಪಟ್ಟೆ ಗಲಿಬಿಲಿಯಾಗತ್ತೆ.

ಮಧೂರುಮೋಹನ ಕಲ್ಲೂರಾಯ, ಗೇರುಕಟ್ಟೆ
ಸಮಾಜಸೇವೆ ಮಾಡುವ ರಾಜಕಾರಣಿಗಳು ದಾರಿ ತಪ್ಪದಿರಲು ಏನು ಪರಿಹಾರ?
ಆಯ್ಕೆ ಮಾಡಿದವನಿಗೆ ಇಳಿಸಲೂ ಅಧಿಕಾರ ಕೊಡುವುದು..

## ವಾರದ ಪ್ರಶ್ನೆ

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ
ನ್ಯಾಯಾಲಯದಲ್ಲಿನ ನ್ಯಾಯದೇವತೆಯ ಕಣ್ಣಿನ ಪಟ್ಟಿ ತೆಗೆದರೆ ಏನಾಗುತ್ತೆ?
ನ್ಯಾಯದೇವತೆಯ ಕಣ್ಣಲ್ಲಿ ಕಣ್ಣಿಟ್ಟು ಸುಳ್ಳು ಹೇಳಲು ಸಾಕ್ಷಿಗೆ, ವಕೀಲರಿಗೆ ಮುಜುಗರವಾಗತ್ತೆ.

ಮಲ್ಲಿಕಾರ್ಜುನ, ಸುರಧೇನುಪುರ
ಸಾವಿಲ್ಲದ ಮನೆಯ ಸಾಸಿವೆ ಸಿಗಬಹುದೇನೋ. ಗಂಡನನ್ನು ಬೈಯದ ಹೆಂಡತಿ ಸಿಗಬಹುದೆ?
ಸಿಗುವಳಲ್ಲ; ಕುರುಡುಗಂಡನ ಮೂಗಹೆಂಡತಿ.

ನರಸಿಂಹ ಪೈ, ಕಾಸರಕೋಡ
ಸೌಂದರ್ಯ, ಬುದ್ಧಿವಂತಿಕೆ ಜೊತೆಯಾಗಿ ಇರುವುದು ಅಪರೂಪ. ಏಕೆ?
ಸೌಂದರ್ಯ ಕಾಪಾಡಿಕೊಳ್ಳಲೆಂದೇ ಇರುವ ಬುದ್ಧಿಯನ್ನೆಲ್ಲ ಖರ್ಚು ಮಾಡಿಬಿಡುವುದರಿಂದ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಸಮುದ್ರದ ಮುತ್ತಿಗೂ, ಮನುಷ್ಯ ಕೊಡುವ ಮುತ್ತಿಗೂ ವ್ಯತ್ಯಾಸ?



ಸಮುದ್ರದ ಮುತ್ತಿಗೆ ಬೆಲೆ ಕಟ್ಟಬಹುದು.

ಕೆ.ಎಂ. ವಿಭೂತಿ, ಹರಿಹರ
ಸಾಧನೆ ಮಾಡುವವರನ್ನು ಕಂಡು ವೇದನೆ ಪಡುವ ನರಪ್ರಾಣಿಗೆ ನಿಮ್ಮ ಹಿತೋಪದೇಶವೇನು?
ಅವರ ದಾರಿಯಲ್ಲೇ ಸಾಗಿ ಓವರ್‌ಟೇಕ್ ಮಾಡಿಬಿಡಿ.

ಅಭಿಷೇಕ್ ಬೊಂಗಾಳೆ, ಬೈಲಹೊಂಗಲ
ಆಗಿನ ಯುವಕರಿಗೂ, ಈಗಿನ ಯುವಕರಿಗೂ ಏನು ವ್ಯತ್ಯಾಸ?
ಆಗ ಹರಕಲು ತೊಟ್ಟವನನ್ನು ಚುಡಾಯಿಸುತ್ತಿದ್ದರು, ಈಗ ಮೆಚ್ಚುತ್ತಾರೆ.

■ ರಾಮ್